| | | | |
|---|---|---|---|
| ೧೨ | ಹಿರೇಕೇರೂರು | ... | ೧೩ |
| ೧೩ | ಸವಣೂರಂ | ... | ೧೦ |
| ೧೪ | ಶಿಗ್ಗಾವಿ | ... | ೨೧ |
| ೧೫ | ಶಿರಹಟ್ಟಿ | ... | ೯ |
| ೧೬ | ಹಾನಗಲ್ | ... | ೧೦೮ |
| ೧೭ | ಕುಂದಗೋಳ್ | ... | ೧೯ |
| | ರಜಾಮೀಸಲು | ... | ... |
| | | ಒಟ್ಟು | ೩೧೯ |

೫) ಜಿಲ್ಲಾವಾರು ನೇಮಕಾತಿ ಸಮಿತಿ ರಚಿಸಲು ಮಾಹಿತಿ ಸಂಗ್ರಹಿಸಲಾಗಿದೆ. ಆದರೆ ಆರ್ಥಿಕ ವಿಷಯ ಸಾಧಿಸಲು ಸಧ್ಯದ ಪರಿಸ್ಥಿತಿಯಲ್ಲಿ ಯಾವುದೇ ಖಾಲಿ ಹುದ್ದೆಗಳನ್ನು ತುಂಬಲು ಆರ್ಥಿಕ ನಿರ್ಬಂಧವಿದೆ. ಆರ್ಥಿಕ ನಿರ್ಬಂಧವನ್ನು ಸಡಿಲಿಸಿದಾಗ ಖಾಲಿ ಹುದ್ದೆಗಳನ್ನು ತುಂಬಲು ಕ್ರಮ ತೆಗೆದುಕೊಳ್ಳಲಾಗುವುದು.

## 'ಎ' ದರ್ಜೆಯ ಸ್ಟಾಂಪ್ ವೆಂಡರಂಗಳಿಗೆ ನಿಗಧಿಗೊಳಿಸಿರುವ ಸ್ಟಾಂಪ್ ಪೇಪರ್ ಮಾರಾಟದಿಂದ ಪೊತ್ತವನ್ನು ಹೆಚ್ಚಿಸುವ ಬಗ್ಗೆ

೨೭೩. ಶ್ರೀ ಪಿ. ಸಿ. ಸಿದ್ದನಗೌಡರ್ (ಕಲಘಟಗಿ).—ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) 'ಎ' ದರ್ಜೆಯ ಸ್ಟಾಂಪ್ ವೆಂಡರುಗಳಿಗೆ ಸರ್ಕಾರದವರು ಎಷ್ಟು ಪೊತ್ತದ ಸ್ಟಾಂಪ್ ಪೇಪರುಗಳನ್ನು ಮಾರಾಟ ಮಾಡುವ ಅನುಮತಿ ನೀಡಲಾಗಿದೆಯೇ ?

ಆ) ಇವರುಗಳಿಗೆ ಕನಿಷ್ಟ ರೂ. ೫೦,೦೦೦-೦೦ ರೂಪಾಯಿಗಳ ಸ್ಟಾಂಪ್ ಪೇಪರ್ ಮಾರಾಟ ಮಾಡಲು ಸರ್ಕಾರದವರು ಅನುಮತಿ ನೀಡುವರೆ ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು).—

ಅ) ಒಂದೊಂದು ವ್ಯವಹಾರದಲ್ಲಿ ಪ್ರಸ್ತುತ ಅವರುಗಳಿಗೆ ಹತ್ತು ಸಾವಿರದವರೆ ಸಾಮಾನ್ಯ ಮುದ್ರಾಂಕ ಪತ್ರ ಮಾರಾಟ ಮಾಡಲು ಅನುಮತಿ ನೀಡಿದೆ.

ಆ) ಇಲ್ಲ.

## ರಾಜ್ಯದಲ್ಲಿರುವ ಎಲ್ಲಾ ದೇವಸ್ಥಾನಗಳನ್ನು ಒಂದೇ ಕಾನೂನಿನ ಅಡಿಯಲ್ಲಿ ತರುವುದು

೨೫೫. ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ (ಸಂಕೇಶ್ವರ).—ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ತಿಳಿಸುವರೆ ?

ಅ) ರಾಜ್ಯದಲ್ಲಿ ಸಮಗ್ರ ದೇವಸ್ಥಾನಗಳ ಅಭಿವೃದ್ಧಿಗಾಗಿ ಏಕರೂಪದ ಸಂಸ್ಥೆಗಳನ್ನು ಸ್ಥಾಪಿಸಲು ಸರ್ಕಾರಕ್ಕಿರುವ ತೊಂದರೆಯೇನು ?

ಆ) ದೇವಸ್ಥಾನಗಳ ಅಭಿವೃದ್ಧಿಗಾಗಿ ಹಾಗೂ ಧರ್ಮ ಶಾಲೆಗಳ ಅಭಿವೃದ್ಧಿಗಾಗಿ ಕಳೆದ ೩ ವರ್ಷಗಳಲ್ಲಿ ಸರ್ಕಾರದಿಂದ ಬಿಡುಗಡೆ ಮಾಡಿರುವ ಒಟ್ಟು ಮೊತ್ತ ಎಷ್ಟು ?

ಇ) ಶ್ರೀ ರೇಣುಕಾ ಎಲ್ಲಮ್ಮ ದೇವಸ್ಥಾನ ಸವದತ್ತಿ ಅಭಿವೃದ್ಧಿಗಾಗಿ ಸರ್ಕಾರದಿಂದ ಯಾವ ಯೋಜನೆಯನ್ನು ಹಮ್ಮಿಕೊಳ್ಳಲಾಗಿದೆ ಹಾಗೂ ಇಲ್ಲಿಗೆ ಬರುವ ಭಕ್ತಾದಿಗಳಿಗೆ ನೀರಿನ ಹಾಗೂ ವಾಸ ಸ್ಥಳದ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಈ) ಹಾಗಿದ್ದಲ್ಲಿ ತೊಂದರೆಗಳನ್ನು ನೀಗಿಸಲು ಸರ್ಕಾರದವರು ತಂತ್ರ ಕ್ರಮ ಕೈಗೊಳ್ಳುವರೇ?